# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **877** |
| ಉತ್ತರಿಸಬೇಕಾದ ದಿನಾಂಕ | : | 21.09.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ವಸತಿ ಯೋಜನೆಗಳಾವುವು ; ಯಾವ ಯಾವ ಇಲಾಖೆಯ ಸಹಯೋಗದಲ್ಲಿ ಅನುಷ್ಠಾನಿಸಲಾಗುತ್ತಿದೆ ;</td><td rowspan="3">ರಾಜ್ಯದಲ್ಲಿನ ವಸತಿ ರಹಿತ ಕುಟುಂಬಗಳಿಗೆ ವಸತಿ ಸೌಕರ್ಯವನ್ನು ಒದಗಿಸಲು ಕೆಳಕಂಡ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ರಾಜ್ಯ ಪುರಸ್ಕೃತ ಯೋಜನೆಗಳು:<br>1. ಬಸವ ವಸತಿ ಯೋಜನೆ<br>2. ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ (ಗ್ರಾಮೀಣ & ನಗರ)<br>3. ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ & ನಗರ)<br>4. ವಾಜಪೇಯಿ ನಗರ ವಸತಿ ಯೋಜನೆ<br>5. ಮುಖ್ಯಮಂತ್ರಿಗಳ ಬಹುಮಹಡಿ ಬೆಂಗಳೂರು ವಸತಿ ಯೋಜನೆ (ಬೆಂಗಳೂರು ನಗರದಲ್ಲಿ ಮಾತ್ರ)<br><br>ಕೇಂದ್ರ ಪುರಸ್ಕೃತ ಯೋಜನೆಗಳು:<br>1. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)<br>2. ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)<br><br>ವಸತಿ ಯೋಜನೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ನಗರ ಪ್ರದೇಶದಲ್ಲಿ ನಗರಾಭಿವೃದ್ಧಿ/ಪೌರಾಡಳಿತ ಇಲಾಖೆಯ ನಗರ ಸ್ಥಳೀಯ ಸಂಸ್ಥೆ ಮತ್ತು ಆಯಾ ಜಿಲ್ಲಾಧಿಕಾರಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಇವುಗಳಲ್ಲದೇ ಕೆಲವೊಂದು ಇಲಾಖೆಗಳ ವಸತಿ ಯೋಜನೆಗಳನ್ನು ಸಹಾ ಅನುಷ್ಠಾನಗೊಳಿಸಲಾಗುತ್ತಿದೆ.<br><br>1) ಚರ್ಮ ಕುಶಲಕರ್ಮಿಗಳು-ಲಿಡ್ಕರ್<br>2) ಅಲೆಮಾರಿ ಅರೆ ಅಲೆಮಾರಿ-ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ<br>3) ಮಾಜಿ ದೇವದಾಸಿ- ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.<br>4) ನೇಕಾರರು-ಕೈಮಗ್ಗ ಮತ್ತು ಜವಳಿ ಇಲಾಖೆ.<br>5) ಕುಶಲಕರ್ಮಿಗಳು-ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ.<br><br>ಫಲಾನುಭವಿಗಳ ಆಯ್ಕೆಯನ್ನು ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಸಭೆ ಮೂಲಕ ಮತ್ತು ನಗರ ಪ್ರದೇಶದಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯ ನಗರ ಆಶ್ರಯ ಸಮಿತಿ ಮೂಲಕ ಆಯ್ಕೆ ಮಾಡಲಾಗುತ್ತದೆ. ಹೀಗೆ ಆಯ್ಕೆಯಾದ ಫಲಾನುಭವಿಗಳ ಮಾಹಿತಿಯನ್ನು ಗ್ರಾಮ</td></tr>
<tr><td>ಆ)</td><td>ವಿವಿಧ ವಸತಿ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಪ್ರಾಧಿಕಾರ ಯಾವುದು ; ವಸತಿ ಯೋಜನೆಯಡಿ ಪಡೆದ ಮನೆಯ ವಿವಿಧ ಹಂತದ ಛಾಯಚಿತ್ರ ಇಂದೀಕರಿಸುವ ಪ್ರಾಧಿಕಾರ ಯಾವುದು ; ದಾಖಲಾತಿ ನಿರ್ವಹಣೆ ಮಾಡುವ ಪ್ರಾಧಿಕಾರ ಯಾವುದು ; (ಸಂಪೂರ್ಣ ವಿವರ ನೀಡುವುದು)</td></tr>
<tr><td>ಇ)</td><td>ವಿವಿಧ ವಸತಿ ಯೋಜನೆಗಳ ಅನುಷ್ಠಾನದಲ್ಲಿ ಆಯ್ಕೆ ಪ್ರಾಧಿಕಾರ, ಛಾಯಚಿತ್ರ ಇಂದೀಕರಿಸುವ ಪ್ರಾಧಿಕಾರ ಹಾಗೂ ದಾಖಲಾತಿ ನಿರ್ವಹಿಸುವ ಪ್ರಾಧಿಕಾರ ಬೇರೆಯಾಗಿರುವುದರಿಂದ, ಗೊಂದಲ ಉಂಟಾಗಿ ಕೆಲವೊಮ್ಮೆ ಗ್ರಾಮ ಸಭೆಗಳಲ್ಲಿ ಗಲಾಟೆಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;</td></tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಪಂಚಾಯ್ತಿ / ನಗರ ಸ್ಥಳೀಯ ಸಂಸ್ಥೆಯು ನಿಗಮದ ವೆಬ್ ಸೈಟ್ ನ ONLINE ಮೂಲಕ ನಮೂದಿಸಿ, ಪಟ್ಟಿಯನ್ನು GP,TP/ULB ಯಿಂದ ZP/DCಗೆ ಮತ್ತು ಅಂತಿಮ ಅನುಮೋದನೆಗೆ ನಿಗಮಕ್ಕೆ ಸಲ್ಲಿಸಬೇಕಿರುತ್ತದೆ. ಹೀಗೆ ಸಲ್ಲಿಸಿದ ಫಲಾನುಭವಿಗಳ ಪಟ್ಟಿಗೆ ಅನುಮೋದನೆಯಾದ ನಂತರ ಕಾಮಗಾರಿ ಆದೇಶ ವಿತರಿಸಲಾಗುತ್ತದೆ.<br><br>ಗ್ರಾಮೀಣ ಪ್ರದೇಶದಲ್ಲಿ ವಿವಿಧ ವಸತಿ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳು ನಿರ್ಮಾಣ ಮಾಡಿಕೊಳ್ಳುವ ಮನೆಗಳ ಜಿ.ಪಿ.ಎಸ್. ಛಾಯಾಚಿತ್ರ ಪ್ರಗತಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಇಂದೀಕರಿಸುತ್ತಾರೆ. ಹಾಗೂ ನಗರ ಪ್ರದೇಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವಿಷಯ ನಿರ್ವಾಹಕರು/ಅಧಿಕಾರಿಗಳು ಜಿ.ಪಿ.ಎಸ್. ಛಾಯಾಚಿತ್ರ ಪ್ರಗತಿಯನ್ನು ಇಂದೀಕರಿಸುತ್ತಾರೆ. ಸಾರ್ವಜನಿಕರು ಸಹಾ ತಮ್ಮ ಮನೆಯ GPS ಛಾಯಾ ಚಿತ್ರವನ್ನು ಅಳವಡಿಸಲು ಅವಕಾಶ ಕಲ್ಪಿಸಲಾಗಿದೆ.<br><br>ವಸತಿ ಯೋಜನೆಗಳಡಿ ಆಯ್ಕೆಯಾಗುವ ಫಲಾನುಭವಿಗಳ ದಾಖಲಾತಿಗಳ ನಿರ್ವಹಣೆಯು ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯತಿ ಹಾಗೂ ನಗರ ಪ್ರದೇಶಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಾದ್ದಾಗಿರುತ್ತದೆ.<br><br>ವಸತಿ ಯೋಜನೆಗಳ ಸುಗಮ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಕಾಲ-ಕಾಲಕ್ಕೆ ಹಲವಾರು ತಿದ್ದುಪಡಿ, ಆದೇಶ/ಸುತ್ತೋಲೆ ಹಾಗೂ ಮಾರ್ಗಸೂಚಿಗಳನ್ನು ಹೊರಡಿಸಿ ಸಮಸ್ಯೆಗಳ ಇತ್ಯಾರ್ಥಕ್ಕೆ ಕ್ರಮವಹಿಸಲಾಗುತ್ತಿದೆ. |
| ಈ) | ಗ್ರಾಮ ಪಂಚಾಯಿತಿಗಳ ಮೂಲಕ ನೇರವಾಗಿ ಅನುಷ್ಠಾನವಾಗುವ ವಸತಿ ಯೋಜನೆ ಹೊರತುಪಡಿಸಿ ಉಳಿದಂತೆ ಗ್ರಾಮ ಸಭೆಯಿಂದ ಅರ್ಹ ವಸತಿ ರಹಿತ ಫಲಾನುಭವಿಗಳ ಪಟ್ಟಿಯನ್ನು ಪಡೆದು, ಉಳಿದ ಪ್ರಕ್ರಿಯೆಗಳ ಜವಾಬ್ದಾರಿಯನ್ನು ಆಯಾ ಇಲಾಖೆಗಳಿಗೆ ನೀಡಬಹುದಾಗಿದ್ದು, ಈ ಬಗ್ಗೆ ಸೂಕ್ತ ಆದೇಶವನ್ನು ಹೊರಡಿಸಲಾಗುವುದೇ ? | ನಿಗಮದಿಂದ ನೇರವಾಗಿ ಅನುಷ್ಠಾನಗೊಳಿಸುತ್ತಿರುವ ವಸತಿ ಯೋಜನೆಗಳ ಜೊತೆಗೆ ವಿವಿಧ ಇಲಾಖೆಗಳ ವಸತಿ ಯೋಜನೆಗಳನ್ನು ಸಹ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಸ್ತುತ ಆಯಾ ಇಲಾಖೆಗಳಡಿ ಆಯ್ಕೆಯಾಗುವ ಫಲಾನುಭವಿಗಳ ಗುರಿ ನಿಗಧಿ ಮತ್ತು ಅಂತಿಮ ಅನುಮೋದನೆಯನ್ನು ನೀಡಲು ಆಯಾ ಇಲಾಖೆಗಳಿಗೆ ಪ್ರತ್ಯೇಕ User ID ಹಾಗೂ Password ನೀಡಲಾಗಿರುತ್ತದೆ.<br><br>ಇನ್ನುಳಿದ ಎಲ್ಲಾ ಅನುಷ್ಠಾನ ಪ್ರಕ್ರಿಯೆಗಳನ್ನು ನಿಗಮದಿಂದ ನಿರ್ವಹಿಸಲಾಗುತ್ತಿದೆ. |

ಸಂಖ್ಯೆ :ವಇ 405 ಹೆಚ್ಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು